ಆ) ಹೌದು. ನಿಜ ಪರಿಕರಗಳ ಕಾಯ್ದೆ ಕಾನೂನಿನ್ವಯ ಕೃಷಿ ಇಲಾಖಾ ವಿವಿಧ ಅಧಿಕಾರಿಗಳನ್ನು ಸದರಿ ಪರಿಕರಗಳ ಪರಿವೀಕ್ಷಕರುಗಳೆಂದು ಪ್ರಕಟಿಸಿದ್ದು ಅವರುಗಳಿಗೆ ಮಾದರಿ ತೆಗೆಯುವ ಅಧಿಕಾರವಿದೆ.

ಇ) ಈ ಮೂರು ತಾಲ್ಲೂಕುಗಳಲ್ಲಿ ವಿವಿಧ ಪರಿಕರಗಳ ಸ್ಯಾಂಪಲ್ ತೆಗೆದ ವಿವರಗಳು ಕೆಳಕಂಡಂತೆ ಇವೆ.

ತಾಲ್ಲೂಕು	ಮಾದರಿ ತೆಗೆದ ಸಂಖ್ಯೆ		
	ಬೀಜ	ರಸ ಗೊಬ್ಬರ	ಕೀಟನಾಶಕ
ಶೃಂಗೇರಿ	6	18	6
N.R.ಪುರ	3	15	10
ಕೊಪ್ಪ	5	22	8

ಈ) ಕಳೆದ ಸಾಲಿನಲ್ಲಿ ರಸಗೊಬ್ಬರ ಕೀಟನಾಶಕ ಮಾದರಿಗಳು ಕಳಪೆ ಬಂದಿರುವುದಿಲ್ಲ. ಅದರ ಮೇಲೆ ತಿಳಿಸಿರುವ 2 ಕಳಪೆ ಗುಣಮಟ್ಟ ಬೀಜ (ಅಂದರೆ ಮೊಳೆಯುವಿಕೆ ಪ್ರಮಾಣ ಕಡಿಮೆ) ಎಂದು ವರದಿಯಾಗಿದ್ದು ಸಂಬಂಧಪಟ್ಟವರ ಮೇಲೆ ಆಡಳಿತಾತ್ಮಕ ಕ್ರಮ ಕೈಗೊಳ್ಳಲಾಗಿದೆ.

ಶೃಂಗೇರಿ, ಕೊಪ್ಪ ಎನ್.ಆರ್. ಪುರಗಳಲ್ಲಿರುವ ಅನುದಾನಿತ ಕಾಲೇಜುಗಳಲ್ಲಿ ಖಾಲಿ ಇರುವ ಉಪನ್ಯಾಸಕರ ಹುದ್ದೆಗಳು

89 (45) : ಶ್ರೀ ಜೀವರಾಜ್ ಡಿ.ಎನ್. (ಶೃಂಗೇರಿ) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಶೃಂಗೇರಿ, ಕೊಪ್ಪ ಎನ್.ಆರ್. ಪುರಗಳಲ್ಲಿರುವ ಸರ್ಕಾರಿ ಹಾಗೂ ಅನುದಾನಿತ ಕಾಲೇಜುಗಳಲ್ಲಿ ಖಾಲಿ ಇರುವ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು, ಕಾಲೇಜುವಾರು ವಿವರ ನೀಡುವುದು)

ಆ) ಈ ಹುದ್ದೆಗಳನ್ನು ಕಾಲಮಿತಿಯೊಳಗೆ ತುಂಬಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು)

ಅ) ಸರ್ಕಾರಿ ಕಾಲೇಜುಗಳ ವಿವರ:

1. ಶೃಂಗೇರಿಯಲ್ಲಿ ಯಾವುದೇ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಇರುವುದಿಲ್ಲ.

2. ಸರ್ಕಾರಿ ಕಾಲೇಜು, ಕೊಪ್ಪ

ಬೋಧಕರ ಖಾಲಿ ಹುದ್ದೆ	ಬೋಧಕೇತರರ ಖಾಲಿ ಹುದ್ದೆ
ಕನ್ನಡ – 01	ಮ್ಯಾನೇಜರ್ – 01
ಇತಿಹಾಸ – 01	ಗ್ರಂಥಾಲಯ ಸಹಾಯಕರು – 01
ರಾಜ್ಯಶಾಸ್ತ್ರ – 01	ಪರಿಚಾರಕರು – 01

3. ಸರ್ಕಾರಿ ಕಾಲೇಜು, ನರಸಿಂಹರಾಜಪುರ

ಬೋಧಕರ ಹುದ್ದೆ	ಬೋಧಕೇತರರ ಖಾಲಿ ಹುದ್ದೆ
ಖಾಲಿ ಇರುವುದಿಲ್ಲ	ಗ್ರಂಥಾಲಯ ಸಹಾಯಕರು – 01
	ಪರಿಚಾರಕರು – 01

ಅನುದಾನಿತ ಕಾಲೇಜು :

(1) ಜೆ.ಸಿ.ಟಿ. ಎಂ. ಕಾಲೇಜು, ಶೃಂಗೇರಿ

ಖಾಲಿ ಇರುವ ಹುದ್ದೆಗಳ ವಿವರ

ಬೋಧಕರ ಹುದ್ದೆ	ಬೋಧಕೇತರರ ಖಾಲಿ ಹುದ್ದೆ
10	06

(2) ಕೊಪ್ಪ ಮತ್ತು ಎನ್ ಆರ್. ಪುರಂಗಳಲ್ಲಿ ಅನುದಾನಿತ ಕಾಲೇಜುಗಳು ಇರುವುದಿಲ್ಲ.

ಆ) 1. ಸರ್ಕಾರಿ ಕಾಲೇಜಿಗೆ ಸಂಬಂಧಿಸಿದಂತೆ:

ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೊಪ್ಪ

(ಅ) ಬೋಧಕರು : 2004–05ನೇ ಸಾಲಿನ ಪ್ರವೇಶ ಪ್ರಕ್ರಿಯೆ ಮುಗಿದ ನಂತರ ಕಾರ್ಯಭಾರ ಪರಿಶೀಲಿಸಿ ಅವಶ್ಯಕತೆಗೆ ಅನುಗುಣವಾಗಿ 2004–05ನೇ ಸಾಲಿನ ಕಾರ್ಯಭಾರಕ್ಕೆ ಅನುಗುಣವಾಗಿ ಇತರೇ ಕಾಲೇಜಿನಲ್ಲಿ ಹೆಚ್ಚುವರಿಯಾಗಿರುವ ಬೋಧಕರನ್ನು ಸದರಿ ಕಾಲೇಜಿಗೆ ಅನ್ಯಕಾರ್ಯ ನಿಮಿತ್ತ ನಿಯುಕ್ತಿಗೊಳಿಸಲಾಗುವುದು.

(ಆ) ವರ್ಗಾವಣೆ ಮೂಲಕ ಖಾಲಿಯಿರುವ ಬೋಧಕೇತರ ಹುದ್ದೆಗಳನ್ನು ತುಂಬಲಾಗುವುದು.

2. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ನರಸಿಂಹರಾಜಪುರ

(ಅ) ಬೋಧಕರ ಹುದ್ದೆ ಖಾಲಿ ಇರುವುದಿಲ್ಲ.

(ಆ) ವರ್ಗಾವಣೆ ಮೂಲಕ ಖಾಲಿ ಇರುವ ಬೋಧಕೇತರ ಹುದ್ದೆಗಳನ್ನು ತುಂಬಲಾಗುವುದು.

3. ಅನುದಾನಿತ ಕಾಲೇಜಿಗೆ ಸಂಬಂಧಿಸಿದಂತೆ:

(ಅ) ಖಾಲಿ ಇರುವ ಬೋಧಕರ ಹುದ್ದೆಗಳನ್ನು ತುಂಬುವ ಬಗ್ಗೆ ಸಂಬಂಧಿಸಿದ ಆಡಳಿತ ಮಂಡಳಿಯಿಂದ ಪ್ರಸ್ತಾವನೆ ಬಂದಲ್ಲಿ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು.

(ಆ) ಸರ್ಕಾರದ ಆರ್ಥಿಕ ಮಿತವ್ಯಯ ಜಾರಿಯಲ್ಲಿರುವುದರಿಂದ ಬೋಧಕೇತರ ಹುದ್ದೆಗಳನ್ನು ತುಂಬಲು ನಿರ್ಭಂಧವಿದೆ.

ರಾಜ್ಯದಲ್ಲಿ ಹನಿ ಮತ್ತು ತುಂತುರು ನೀರಾವರಿಗೆ ಸಹಾಯ ಧನ

90 (47) : ಶ್ರೀ ಜೀವರಾಜ್ ಡಿ.ಎನ್. (ಶೃಂಗೇರಿ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಹನಿ ಮತ್ತು ತುಂತುರು ನೀರಾವರಿಗೆ 2003–04ನೇ ಸಾಲಿನಲ್ಲಿ ಮತ್ತು ಪ್ರಸಕ್ತ ಸಾಲಿನಲ್ಲಿ ನಿಗದಿಪಡಿಸಿದೆ ಮತ್ತು ಬಿಡುಗಡೆ ಮಾಡಿದ ಸಹಾಯಧನ ಎಷ್ಟು: (ಜಿಲ್ಲಾವಾರು ಮತ್ತು ಚಿಕ್ಕಮಗಳೂರು ಜಿಲ್ಲೆಯ ತಾಲ್ಲೂಕುವಾರು ವಿವರ ನೀಡುವುದು?

ಶ್ರೀ ಶ್ರೀನಿವಾಸಗೌಡ (ಕೃಷಿ ಸಚಿವರು)

ಅ) ಹನಿ ಮತ್ತು ತುಂತುರು ನೀರಾವರಿಗೆ 2003–04ನೇ ಸಾಲಿನಲ್ಲಿ ಮತ್ತು ಪ್ರಸಕ್ತ ಸಾಲಿನಲ್ಲಿ ನಿಗದಿಪಡಿಸಿದ ಮತ್ತು ಬಿಡುಗಡೆ ಮಾಡಿದ ಸಹಾಯಧನಗಳ ವಿವರ ಇಂತಿದೆ.